**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.644/2023**

**CW -5 PW-4**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ದೇವರಾಜ |
| ತಂದೆ | ಃ | ಕಾಳಿಂದ ನಾಯಕ |
| ವಯಸ್ಸು | ಃ | 32 |
| ಉದ್ಯೋಗ | ಃ | ಪಿ.ಸಿ |
| ವಾಸಸ್ಥಳ | ಃ | ಜಾಲಹಳ್ಳಿ |
| ಪ್ರಮಾಣಿಕರಿಸಿದ ದಿನಾಂಕ | ಃ | **17-04-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ನಾನು 2019 ರಿಂದ ಇಲ್ಲಿವರೆಗೆ ಪಿಸಿ ಜಾಲಹಳ್ಳಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ **24-06-2023** ರಂದು ಬೆಳಿಗ್ಗೆ **11:40** ಗಂಟೆಗೆ ಪಿ.ಎಸ್.ಐ ಇವರಿಗೆ ಬಾತ್ಮಿ ಬಂದ ಮೇರೆಗ ಠಾಣೆಗೆ ಪಂಚರನ್ನು ಕರೆದುಕೊಂಡು ಸರಕಾರಿ ವಾಹನದಲ್ಲಿ ಹೊರಟು ಮಧ್ಯಾಹ್ನ **12.30** ಗಂಟೆಗೆ ಶಾವಂತಗಲ್ ಗ್ರಾಮದ ಶಾಲೆ ಹತ್ತಿರ ಹೊರ ವಲಯದಲ್ಲಿ ವಾಹವ ನಿಲ್ಲಿಸಿ ಮಾರುತಿ ತಂದೆ ಶರಣಪ್ಪ ಇವರ ಡಬ್ಬಿ ಅಂಗಡಿ ಕಡೆಗೆ ನಡೆದುಕೊಂಡು ಹೋಗಿ ನೋಡಲಾಗಿ ಸದರಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಮಧ್ಯದ ಪೌಚುಗಳನ್ನು ಮಾರಾಟ ಮಾಡುತ್ತಿದ್ದು ಜನರು ಕೊಂಡು ಕೊಳ್ಳುತ್ತಿದ್ದು ಸದರಿ ಮಾರಾಟವನ್ನು ಖಚಿತಪಡಿಸಿಕೊಂಡು ಮಧ್ಯಾಹ್ನ **12.35** ಗಂಟೆಗೆ ದಾಳಿ ಮಾಡಿದ್ದು ಜನರು ಓಡಿ ಹೋಗಿದ್ದು ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿಬಿದ್ದಿರುತ್ತಾನೆ. ಆತನನ್ನು ವಿಚಾರಿಸಲಾಗಿ ಹೆಸರು ಮಾರುತಿ ತಂದೆ ಶರಣಪ್ಪ ಎಂದು ತಿಳಿಸಿದ್ದು ಮಧ್ಯ ಮಾರಲು ಪರವಾನಿಗೆ ಇಲ್ಲವೆಂದು ಹೇಳಿರುತ್ತಾನೆ. ಸ್ಥಳದಲ್ಲಿ ಅಕ್ರಮ ಮಧ್ಯವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ **90** ಎಂ.ಎಲ್ ಓ.ಸಿ **36** ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಸದರಿ ಮಧ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಸೀಲ್ ಮಾಡಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಗಿತ್ತು ಎಂದು ನಾನು ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ಗುರುತಿನ ಬಗ್ಗೆ ತಕರಾರು ಇಲ್ಲವೆಂದು ವಕೀಲರು ಹೇಳಿರುತ್ತಾರೆ.

**<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ. ಎ.ಪಿ ವಕೀಲರಿಂದ.**

ದಾಳಿ ಮಾಡಲು ನಾವು ಒಟ್ಟು **4** ಜನ ಪೊಲೀಸರು ಹೋಗಿರುತ್ತೇವೆ. ಪಂಚರು ಜಾಲಹಳ್ಳಿ ಗ್ರಾಮದವರು ಆಗಿರುತ್ತಾರೆ. ಪಂಚರನ್ನು ಫೋನ್ ಮೂಲಕ ಠಾಣೆಗೆ ಕರೆಸಲಾಗಿತ್ತು. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಜಾಲಹಳ್ಳಿಯಿಂದ **11.30** ಗಂಟೆಗೆ ಹೊರಟಿರುತ್ತೇವೆ. ಬೆಳಿಗ್ಗೆ **11.30** ಗಂಟೆಗೆ ಜಾಲಹಳ್ಳಿಯಿಂದ ಹೋಗಿರುತ್ತೇವೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಬೆಳಿಗ್ಗೆ **11.40** ಗಂಟೆಗೆ ಠಾಣೆಯಿಂದ ಹೊರಟಿರುತ್ತೇವೆ ಎಂದು ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಮೊದಲು ಇಲ್ಲ ಎಂದು ನುಡಿದು ನಂತರ ಸರಿ ಎಂದು ನುಡಿಯುತ್ತಾರೆ. ಡಬ್ಬಿ ಅಂಗಡಿ ಹತ್ತಿರ ಖರೀದಿ ಮಾಡಲು **5-6** ಜನ ಇದ್ದರು. ಸದರಿ ಜನರನ್ನು ಹಿಡಿಯಲು ಪ್ರಯತ್ನಿಸಿದಾಗ ಸಿಕ್ಕಿರಲಿಲ್ಲ. ಜನರನ್ನು ಹಿಡಿಯಲು ಪ್ರಯತ್ನಿಸಿರುತ್ತೇವೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಡಬ್ಬಿ ಅಂಗಡಿ ಉತ್ತರಕ್ಕೆ ಶಾಲೆ, ದಕ್ಷಿಣಕ್ಕೆ ಆರೋಪಿ ಅಂಗಡಿ ಮತ್ತು ಮನೆ, ಪೂರ್ವಕ್ಕೆ ಆಲ್ಕೋಡ್-ವಡವಟ್ಟಿ ಮುಖ್ಯ ರಸ್ತೆ ಮತ್ತು ಪಶ್ಚಿಮಕ್ಕೆ ಆರೋಪಿ ಅಂಗಡಿ ಇರುತ್ತದೆ. ಆರೋಪಿಗೆ ಒಂದೇ ಅಂಗಡಿ ಇರುತ್ತದೆ. ಆರೋಪಿಯಿಂದ **36** ಓ.ಸಿ ಪೌಚುಗಳನ್ನು ಜಪ್ತಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾಳಿಗೆ ಪಂಚರನ್ನು ಮತ್ತು ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಚಾಸಾ-**1** ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.